ಕರ್ನಾಟಕ ಸರ್ಕಾರ

**ಮರು ಮೌಲ್ಯಮಾಪನಕ್ಕಾಗಿ ಅರ್ಜಿ**

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003**

**ಏಪ್ರಿಲ್ / ಜೂನ್ - 20 ರ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನ ಮಾಡಲು ಅರ್ಜಿ**

## (ಅರ್ಜಿಯನ್ನು ತುಂಬುವ ಮೊದಲು ಹಿಂಬದಿಯಲ್ಲಿ ನೀಡಿರುವ ಸೂಚನೆಗಳನ್ನು ಗಮನಿಸಿ)

## ಉತ್ತರ ಪತ್ರಿಕೆಯ ಛಾಯಪ್ರತಿ ಪಡೆದವರಿಗೆ ಮಾತ್ರ

1. ಅಭ್ಯರ್ಥಿಯ ಹೆಸರು ಮತ್ತು
ವಾಸಸ್ಥಳದ ಪೂರ್ಣ ವಿಳಾಸ
(ಪಿನ್ ಕೋಡ್ ಕಡ್ಡಾಯ)

2. ಅಭ್ಯರ್ಥಿಯ
ನೋಂದಣಿ ಸಂಖ್ಯೆ

| | | | | | | | | | | |
|---|---|---|---|---|---|---|---|---|---|---|
| | | | | | | | | | | |

ಪರೀಕ್ಷೆಯ ವರ್ಷ ............................
ಮತ್ತು ತಿಂಗಳು ...............................

3. ಅಭ್ಯರ್ಥಿಯು ಓದಿದ ಪ್ರೌಢಶಾಲೆ /
ಸಂಯುಕ್ತ ಪದವಿ ಪೂರ್ವ ಕಾಲೇಜಿನ
ಹೆಸರು ಮತ್ತು ವಿಳಾಸ

4. ಪರೀಕ್ಷಾ ಕೇಂದ್ರದ ಸಂಕೇತ :

5. ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಬಯಸುವ ವಿಷಯ/ಗಳು

| ವಿಷಯ | ವಿಷಯ ಸಂಕೇತ ಸಂಖ್ಯೆ | ಗಳಿಸಿದ ಅಂಕಗಳು | ಮಾಧ್ಯಮು |
|---|---|---|---|
| 1. ಪ್ರಥಮ ಭಾಷೆ .......................... | | | |
| 2. ದ್ವಿತೀಯ ಭಾಷೆ .......................... | | | |
| 3. ತೃತೀಯ ಭಾಷೆ .......................... | | | |
| 4. ಗಣಿತ | 81 | | |
| 5. ವಿಜ್ಞಾನ | 83 | | |
| 6. ಸಮಾಜ ವಿಜ್ಞಾನ | 85 | | |

6. ಕಟ್ಟಿದ ಶುಲ್ಕ ಮೊತ್ತ ರೂ. ......................... ಅಕ್ಷರಗಳಲ್ಲಿ..............................................................
ಬ್ಯಾಂಕ್ ಹುಂಡಿ ಸಂಖ್ಯೆ....................... ದಿನಾಂಕ ......................... ಬ್ಯಾಂಕಿನ ಹೆಸರು .................................

ಮೇಲೆ ನೀಡಿರುವ ಮಾಹಿತಿಗಳು ಸರಿಯಾಗಿವೆ ಹಾಗೂ ಹಿಂಬದಿಯಲ್ಲಿ ನೀಡಿರುವ ಸೂಚನೆಗಳನ್ನು ಓದಿ ಮನದಟ್ಟು ಮಾಡಿಕೊಂಡು ಅದಕ್ಕೆ ಬದ್ಧನಾಗಿರುತ್ತೇನೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : ಅಭ್ಯರ್ಥಿಯ / ಪೋಷಕರ ಸಹಿ

ಮೇಲೆ ನೀಡಿರುವ ವಿವರಗಳು ಸರಿಯಾಗಿದೆ ಎಂದು ದೃಢೀಕರಿಸಿದೆ.

ದಿನಾಂಕ : ಶಾಲಾ ಮುಖ್ಯಸ್ಥರ ಸಹಿ (ಶಾಲಾ ಮೊಹರಿನೊಂದಿಗೆ)

# ಸೂಚನೆಗಳು

1. ಛಾಯ ಪ್ರತಿ ಪಡೆದವರಿಗೆ ಮಾತ್ರ ಮರುಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಲಾಗುವುದು.
2. ಮರುಮೌಲ್ಯಮಾಪನಕ್ಕಾಗಿ ಅರ್ಜಿಯನ್ನು ವಿದ್ಯಾರ್ಥಿ/ಪೋಷಕರ ಸಹಿಯೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ರಿಜಿಸ್ಟರ್ ಅಂಚೆಯ ಮೂಲಕವಾಗಲಿ ಕಳುಹಿಸಬಹುದು. ಅರ್ಜಿಗಳನ್ನು ಕಳುಹಿಸಬೇಕಾದ ವಿಳಾಸ :
   ಶ್ರೀ ಬಿ. ಗೋವಿಂದೇಗೌಡ
   ಹಿರಿಯ ಸಹಾಯಕ ನಿರ್ದೇಶಕರು, 'ಸಿ' ಶಾಖೆ, ಕ.ಪ್ರೌ.ಶಿ.ಪ. ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.
3. ಅರ್ಜಿಯ ಲಕೋಟೆಯ ಮೇಲೆ ''...................................... '' ವಿಷಯಗಳ ಮರು ಮೌಲ್ಯ ಮಾಪನಕ್ಕೆ ಅರ್ಜಿ ಎಂದು ದಪ್ಪ ಅಕ್ಷರಗಳಲ್ಲಿ ನಮೂದಿಸಬೇಕು.
4. ಪ್ರತಿ ಅರ್ಜಿಯ ಜೊತೆ ಮರುಮೌಲ್ಯಮಾಪನಕ್ಕಾಗಿ ನಿಗದಿಪಡಿಸಿರುವ ಶುಲ್ಕ ಒಂದು ವಿಷಯಕ್ಕೆ ₹. 700/- ಗಳ ಬ್ಯಾಂಕ್ ಹುಂಡಿಯನ್ನು ಪಡೆದು ಕಳುಹಿಸಬೇಕು. ಬ್ಯಾಂಕ್ ಹುಂಡಿಯನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ **"Secretary, KSEEB, Bangalore"** ಇವರ ಪದನಾಮಕ್ಕೆ ಪಡೆದಿರಬೇಕು.
5. ಪ್ರತಿ ಬ್ಯಾಂಕ್ ಹುಂಡಿಯ ಹಿಂಭಾಗದಲ್ಲಿ **ಅಭ್ಯರ್ಥಿಯು ತನ್ನ ಹೆಸರು ಮತ್ತು ನೋಂದಣಿ ಸಂಖ್ಯೆಯನ್ನು** ತಪ್ಪದೇ ನಮೂದಿಸಬೇಕು.
6. ಅಪೂರ್ಣ ಅರ್ಜಿಯನ್ನು ಮತ್ತು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಶುಲ್ಕವನ್ನು ಮಂಡಳಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
7. **ಅನುತ್ತೀರ್ಣ ವಿದ್ಯಾರ್ಥಿಗಳು ಮರುಮೌಲ್ಯ ಮಾಪನಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಫಲಿತಾಂಶಕ್ಕೆ ಕಾಯದೆ ತಮ್ಮ ಮುಂದಿನ ಪರೀಕ್ಷೆಗೆ ಶುಲ್ಕ ಕಟ್ಟಿ ಅರ್ಜಿಯನ್ನು ಸಲ್ಲಿಸಬೇಕು. ಹೀಗೆ ಮಾಡದೆ ಮುಂದಿನ ಪರೀಕ್ಷೆಗೆ ಅರ್ಜಿ ಸಲ್ಲಿಸದಿದ್ದಲ್ಲಿ ಅಭ್ಯರ್ಥಿಯೇ ಜವಾಬ್ದಾರರಾಗುತ್ತಾರೆ.**
8. ಪರೀಕ್ಷೆಯ ಫಲಿತಾಂಶ ಪಟ್ಟಿಗಳನ್ನು ಶಾಲೆಯ ಮುಖ್ಯಸ್ಥರಿಗೆ ಕಳುಹಿಸುವುದರಿಂದ ಅರ್ಜಿದಾರರು ಅಂಕಪಟ್ಟಿಗೆ ಕಾಯದೆ ಮರುಮೌಲ್ಯಮಾಪನಕ್ಕೆ ಸಂಬಂಧಿಸಿದ ಅರ್ಜಿಯನ್ನು ಸಲ್ಲಿಸಬಹುದು.
9. ಪರೀಕ್ಷೆಯ ಅವ್ಯವಹಾರದಲ್ಲಿ ತೊಡಗಿದಂತಹ ಹಾಗೂ ಫಲಿತಾಂಶ ತಡೆಹಿಡಿದಿರುವಂತಹ ವಿದ್ಯಾರ್ಥಿಗಳಿಂದ ಮರುಮೌಲ್ಯಮಾಪನಕ್ಕೆ ಸಂಬಂಧಿಸಿದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.
10. ಅರ್ಜಿಯೊಂದಿಗೆ ಅಭ್ಯರ್ಥಿಯ ಪ್ರಸಕ್ತ ಸಾಲಿನ ಪರೀಕ್ಷೆಯ ಪ್ರವೇಶ ಪತ್ರದ ಛಾಯಾ ಪ್ರತಿಯನ್ನು ಮತ್ತು ಮಂಡಳಿಯಿಂದ ಪಡೆದ ಸಂಬಂಧಿಸಿದ ವಿಷಯದ ಉತ್ತರ ಪತ್ರಿಕೆಯ ಛಾಯಾ ಪ್ರತಿಯ ಮುಖಪುಟದ ನಕಲನ್ನು ತಪ್ಪದೇ ಲಗತ್ತಿಸಬೇಕು.
11. ಛಾಯ ಪ್ರತಿಯನ್ನು ಪಡೆದಂತಹ ವಿದ್ಯಾರ್ಥಿಗಳು ಅದನ್ನು ಸಂಪೂರ್ಣವಾಗಿ ಪರಿಶೀಲಿಸಿ ಮೌಲ್ಯಮಾಪನ ಸರಿ ಇಲ್ಲವೆಂದು ಕಂಡುಬಂದಲ್ಲಿ ಮರು ಮೌಲ್ಯಮಾಪನಕ್ಕೆ ಅರ್ಜಿಯನ್ನು ಸಲ್ಲಿಸುವುದು. ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವಂತಿಲ್ಲ, ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
12. ಮರುಮೌಲ್ಯಮಾಪನದಲ್ಲಿ ಅಂಕಗಳು - ಪ್ರತಿ ವಿಷಯಕ್ಕೆ 6 ಅಥವಾ 6ಕ್ಕಿಂತ ಹೆಚ್ಚಾಗಿದ್ದಲ್ಲಿ ಮಾತ್ರ ಮರುಮೌಲ್ಯಮಾಪನದ ಶುಲ್ಕವನ್ನು ಹಿಂದಿರುಗಿಸಲಾಗುವುದು.
13. ಮರುಮೌಲ್ಯಮಾಪನದ ಫಲಿತಾಂಶದ ನಂತರ ಮರುಪರಿಶೀಲನೆಗಾಗಲೀ ಅಥವಾ ಮೇಲ್ಮನವಿಗಾಗಲೀ ಅವಕಾಶವಿರುವುದಿಲ್ಲ.
14. **ಮರುಮೌಲ್ಯಮಾಪನದಲ್ಲಿ ಅಂಕಗಳು ಬದಲಾವಣೆಯಾದಲ್ಲಿ ಮೂಲ ಅಂಕಪಟ್ಟಿಯನ್ನು ಮಂಡಳಿಗೆ 15 ದಿನಗಳ ಒಳಗಾಗಿ ಸಲ್ಲಿಸಿ ಪರಿಷ್ಕೃತ ಅಂಕಪಟ್ಟಿಯನ್ನು ಪಡೆಯುವುದು.**
15. ಛಾಯಾಪ್ರತಿಯನ್ನು ಪಡೆದಂತಹ ವಿದ್ಯಾರ್ಥಿಗಳು ಛಾಯಾಪ್ರತಿ ಪಡೆದ 10 ದಿನಗಳ ಒಳಗಾಗಿ ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸುವುದು ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
16. ಛಾಯಾಪ್ರತಿ ಪಡೆದ ನಂತರ ಮುಖ ಪುಟದಲ್ಲಿನ ಅಂಕಗಳು ಕೂಡುವಿಕೆಯಲ್ಲಿಯೇ ತಪ್ಪಾಗಿದ್ದು ಸರಿಪಡಿಸಿದ ನಂತರ ಅಂಕಗಳು ಹೆಚ್ಚಾದಲ್ಲಿ ಅಂತಹ ಅಭ್ಯರ್ಥಿಗಳು ಮರು ಮೌಲ್ಯ ಮಾಪನಕ್ಕೆ ಅರ್ಜಿ ಸಲ್ಲಿಸದೇ ಮಂಡಳಿಯನ್ನು ಸಂಪರ್ಕಿಸಿ ಕೂಡುವಿಕೆಯನ್ನು ಸರಿ ಪಡಿಸಿಕೊಳ್ಳಬಹುದಾಗಿದೆ.

ಸಹಿ/-

**ನಿರ್ದೇಶಕರು (ಪರೀಕ್ಷೆಗಳು)**